(ಕಂದಾಯ ಇಲಾಖೆ)

# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ಸಂ.ಕಂ.ಪಹಣಿ:ಅಪೀಲು:303/2014-15 ದಿನಾಂಕ:28.04.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ.**

*******

**ವಾದಿಗಳು: ಶ್ರೀ/ಶ್ರೀಮತಿ**

1] ಬಿ.ಭೀಮಪ್ಪ ತಂದೆ ಬೆಂಗಳೂರು ಬಸಪ್ಪ,
ವಾಸ: ಚಿಲಕನಹಟ್ಟಿ ಗ್ರಾಮ,
ಹೊಸಪೇಟೆ ತಾಲೂಕು.

[ಶ್ರೀಮತಿ ಲಲಿತಾ.ಬಿ., ವಕೀಲರು, ಹೊಸಪೇಟೆ.]

**ಪ್ರತಿವಾದಿಗಳು: ಶ್ರೀ/ಶ್ರೀಮತಿ**

1] ತಹಶೀಲ್ದಾರರು, ಹೊಸಪೇಟೆ.

**ವ್ಯಾಜ್ಯದ ಜಮೀನು**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹೊಸಪೇಟೆ | ಮರಿಯಮ್ಮನಹಳ್ಳಿ | ತೆಲುಗುಬಾಳು | 34/ಬಿ ಪೈಕಿ | 01 ಎಕರೆ 92 ಸೆಂಟ್ಸ್ |
| ಹೊಸಪೇಟೆ | ಮರಿಯಮ್ಮನಹಳ್ಳಿ | ಚಿಲಕನಹಟ್ಟಿ | 39 ಪೈಕಿ | 00 ಎಕರೆ 34 ಸೆಂಟ್ಸ್ |

**ಪೀಠಿಕೆ:-**

ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ತೆಲುಗುಬಾಳು ಗ್ರಾಮದ ಸ.ನಂ.34/ಬಿ ಪೈಕಿ ವಿಸ್ತೀರ್ಣ: 01 ಎಕರೆ 92 ಸೆಂಟ್ಸ್; ಮತ್ತು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ಚಿಲಕನಹಟ್ಟಿ ಗ್ರಾಮದ ಸ.ನಂ.39 ಪೈಕಿ ವಿಸ್ತೀರ್ಣ: 00 ಎಕರೆ 34 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: 1] 02/2003-04 ದಿನಾಂಕ: 18.11.2003 ಹಾಗೂ 2] 06/2003-04 ದಿನಾಂಕ: 04.11.2003 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಅಪೀಲನ್ನು ಮತ್ತು ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಲು ಕೋರಿ ಕಾಲಮಿತಿ ಕಾಯ್ದೆಯ ಕಲಂ 5 ರಡಿಯಲ್ಲಿ ವಾದಿಪರ ವಕೀಲರು ದಿನಾಂಕ:03.3.2015 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಿ, ನೈಸರ್ಗಿಕ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:30.04.2015 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಡತದಲ್ಲಿಯ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ.

1. ಸದರಿ ವ್ಯಾಜ್ಯದ ಜಮೀನು ಮೂಲತ: ದಿವಂಗತ ಬೆಂಗಳೂರು ಭೀಮಪ್ಪನಿಗೆ ಸೇರಿದ್ದು, ಇವರ ತರುವಾಯ 3 ಜನ ಮಕ್ಕಳು ದಿನಾಂಕ:20.06.1995 ರಂದು ಸ್ಥಿರಾಸ್ತಿ ಜಮೀನುಗಳನ್ನು ಪಾಲು ವಿಭಾಗ ಮಾಡಿಕೊಂಡಿರುವುದಾಗಿ, ಅದರ ಪ್ರಕಾರ ಪಹಣಿಯಲ್ಲಿ ಹಕ್ಕು ಬದಲಾವಣೆ ಮಾಡಿಕೊಂಡಿರುವುದಾಗಿ ವಾದಿಪರ ವಕೀಲರು ತಿಳಿಸಿರುತ್ತಾರೆ.

2. ಸದರಿ ವ್ಯಾಜ್ಯದ ಜಮೀನು ದಿನಾಂಕ:24.04.2002 ರಂದು ಸಣ್ಣ ದುರುಗಪ್ಪ ತಂದೆ ದಿ॥ ಬೆಂಗಳೂರು ಭೀಮಪ್ಪ ಇವರ ಪಾಲಿಗೆ ಬಂದಿದ್ದು, ಇವರು ಸದರಿ ಜಮೀನನ್ನು ಬಿ.ಭೀಮಪ್ಪ ತಂದೆ ಬೆಂಗಳೂರು ಬಸಪ್ಪ ಇವರಿಗೆ ಕ್ರಯಕ್ಕೆ ಕೊಟ್ಟಿದ್ದು, ಹಣಕಾಸಿನ ತೊಂದರೆಯಿಂದಾಗಿ ನೋಂದಣಿ ಮಾಡಿಸದೇ ತಹಶೀಲ್ದಾರರು, ಹೊಸಪೇಟೆ ಇವರಲ್ಲಿ ನೇರವಾಗಿ ಹಕ್ಕು ಬದಲಾವಣೆ ಆದೇಶ ಸಂಖ್ಯೆ:02/2003-04 ದಿನಾಂಕ:18.11.2013 ಮತ್ತು ಹಕ್ಕು ಬದಲಾವಣೆ ಆದೇಶ ಸಂಖ್ಯೆ:06/2003-04 ದಿನಾಂಕ:04.11.2003 ರ ಪ್ರಕಾರ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಆಗಿರುವುದಾಗಿ ವಾದಿಪರ ವಕೀಲರು ತಿಳಿಸಿದ್ದು, ಈ ಬಗ್ಗೆ ಮ್ಯುಟೇಷನ್ ಪ್ರತಿಯನ್ನು ಲಗತ್ತಿಸಿರುತ್ತಾರೆ.

3. ಆದರೆ ಹಕ್ಕು ಬದಲಾವಣೆ ಸಂದರ್ಭದಲ್ಲಿ ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಬಸಪ್ಪ ಎಂಬುದರ ಬದಲಾಗಿ ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಸಣ್ಣ ದುರುಗಪ್ಪ ಎಂದು ವಾದಿಯ ತಂದೆಯ ಹೆಸರು ತಪ್ಪಾಗಿ ಪಹಣಿಯಲ್ಲಿ ನಮೂದಾಗಿರುವುದಾಗಿ ತಿಳಿಸಿರುತ್ತಾರೆ.

4. ಸದರಿ ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ, ಪ್ರಶ್ನಿತ ಆದೇಶದಿಂದ ಬಾಧಿತಗೊಂಡ ವಾದಿಯು, ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಸಣ್ಣ ದುರುಗಪ್ಪ ಎಂದು ತಪ್ಪಾಗಿ ನಮೂದಾಗಿರುವ ಹೆಸರನ್ನು ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಬಸಪ್ಪ ಎಂದು ತಿದ್ದುಪಡಿ ಮಾಡಿಕೊಡಲು ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿಪರ ವಕೀಲರ ವಾದವನ್ನು ಆಲಿಸಲಾಗಿ ಹಾಗೂ ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಮತ್ತು ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಸಣ್ಣ ದುರುಗಪ್ಪ ಎಂದು ತಪ್ಪಾಗಿ ನಮೂದಾಗಿರುವ ಹೆಸರನ್ನು **ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಬಸಪ್ಪ** ಎಂದು ಹಕ್ಕು ಬದಲಾವಣೆ ಮಾಡಲು ಈ ಕೆಳಕಂಡತೆ

**-: ಆದೇಶ :-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ಅಂಗೀಕರಿಸುತ್ತಾ,** ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ತೆಲುಗುಬಾಳು ಗ್ರಾಮದ ಸ.ನಂ.34/ಬಿ ಪೈಕಿ ವಿಸ್ತೀರ್ಣ:01 ಎಕರೆ 92 ಸೆಂಟ್ಸ್; ಮತ್ತು ಹೊಸಪೇಟೆ ತಾಲೂಕು ಮರಿಯಮ್ಮನಹಳ್ಳಿ ಹೋಬಳಿ ಚಿಲಕನಹಟ್ಟಿ ಗ್ರಾಮದ ಸ.ನಂ.39 ಪೈಕಿ ವಿಸ್ತೀರ್ಣ:00 ಎಕರೆ 34 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ಕಂದಾಯ ನಿರೀಕ್ಷಕರು, ಮರಿಯಮ್ಮನಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ: 1] 02/2003-04 ದಿನಾಂಕ: 18.11.2003 ಹಾಗೂ 2] 06/2003-04 ದಿನಾಂಕ: 04.11.2003 ವನ್ನು ವನ್ನು ರದ್ದುಪಡಿಸುತ್ತಾ, ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಸಣ್ಣ ದುರುಗಪ್ಪ ಎಂದು ತಪ್ಪಾಗಿ ನಮೂದಾಗಿರುವ ಹೆಸರನ್ನು **ಬೆಂಗಳೂರು ಭೀಮಪ್ಪ ತಂದೆ ಬೆಂಗಳೂರು ಬಸಪ್ಪ** ಎಂದು ಹಕ್ಕು ಬದಲಾವಣೆ ಮಾಡಲು ತಹಶೀಲ್ದಾರರು, ಹೊಸಪೇಟೆ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:28.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
ಪ್ರತಿಯನ್ನು:- ತಹಶೀಲ್ದಾರರು, ಹೊಸಪೇಟೆ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.